ಇ) ಈ ಕೆಳಗಿನ ವಸ್ತುಗಳನ್ನು ತಯಾರಿಸುತ್ತಿದ್ದು, ಆ ವಸ್ತುಗಳ ತಯಾರಿಕೆ ಕೆಲಸ ನಿರ್ವಹಣೆಗಾಗಿ ಹಾಗೂ ಯಂತ್ರೋಪಕರಣಗಳ ಉಸ್ತುವಾರಿಗಾಗಿ ಮೈಸೂರು ಗಂಧದ ಎಣ್ಣೆ ಕಾರ್ಖಾನೆ ನೌಕರರನ್ನು ತೊಡಗಿಸಲಾಗಿದೆ.

೧) ಊದುಬತ್ತಿ ೨) ಮೈಸೂರು ಗಂಧದ ಸಾಬೂನು (ಸ್ನಾನದ ಸಾಬೂನು)

೩) ಮೈಸೂರು ಮಲ್ಲಿಗೆ (ಸ್ನಾನದ ಸಾಬೂನು) ಸಾಬೂನು.

ಶ್ರೀ ವೇದಾಂತ ಹೆಬ್ಬಿಗೆ.—ಈಗ ಸರ್ಕಾರದ ವಶದಲ್ಲಿ ಸುಮಾರು ೧೨ ಕೋಟಿ ಬೆಲೆ ಬಾಳುವ ಗಂಧದ ಮರ ಸ್ಟಾಕ್ ಇದೆ. ಇದನ್ನು ಸುಮಾರು ಆರೇಳು ತಿಂಗಳಿಗಿಂತಲೂ ಜಾಸ್ತಿ ಅವಧಿಯಲ್ಲಿ ಇಟ್ಟಿದ್ದಾರೆ. ಇಷ್ಟೊಂದು ಅವಧಿಯಾದ ಮೇಲೆ ಗಂಧದ ಮರದಿಂದ ಗಂಧದೆಣ್ಣೆ ಕಡಿಮೆಯಾಗುತ್ತೆ ಹೋಗುತ್ತದೆ. ಈಗಾಗಲೇ ಅವಧಿ ತೀರಿದೆ. ಗಂಧದೆಣ್ಣೆ ತಯಾರು ಮಾಡುವ ಫ್ಯಾಕ್ಟರಿಗಳು ಗಂಧದ ಮರದ ಅಭಾವದಿಂದ ಎಣ್ಣೆ ತೆಗೆಯುವುದನ್ನು ನಿಲ್ಲಿಸಿದ್ದು ಸದರಿ ಫ್ಯಾಕ್ಟರಿಗಳಿಗೆ ಮರ ಒದಗಿಸಲು ಏನು ವ್ಯವಸ್ಥೆ ಮಾಡಿದ್ದೀರಿ ? ಎರಡನೆಯದಾಗಿ ಪರದೇಶಗಳಿಂದ ಗಂಧದೆಣ್ಣೆಗಾಗಿ ಎಷ್ಟು ಟನ್ ಬೇಡಿಕೆ ಬಂದಿದೆ, ವಿವರ ಕೊಡಿ.

ಶ್ರೀ ಜೆ ಹೆಚ್. ಪಟೇಲ್.—ಅಧ್ಯಕ್ಷರೇ, ಈ ಪ್ರಶ್ನೆಗೆ ಉತ್ತರ ಒದಗಿಸಲು ಸ್ವಲ್ಪ ಕಾಲಾವಕಾಶ ಕೊಡಬೇಕೆಂದು ಕೋರುತ್ತೇನೆ.

ಶ್ರೀ ವೇದಾಂತ ಹೆಬ್ಬಿಗೆ.—ಸ್ವಾಮಿ, ನನ್ನ ಪ್ರಶ್ನೆಗೆ ಉಪ-ಪ್ರಶ್ನೆ ಕೇಳಲು ನನಗೆ ಅವಕಾಶ ಕೊಡಲಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇಷ್ಟು ಹೊತ್ತು ಏನು ಮಾಡುತ್ತಿದ್ದಿರಿ ? ಈಗಾಗಲೇ ನನ್ನ ಪ್ರಶ್ನೆ ಬಂದಿದೆ.

ಶ್ರೀ ಎಸ್. ಬಂಗಾರಪ್ಪ—ಪಟೇಲರು ' ಜಂಟಿ ನಿರ್ದೇಶಕರಂ ' ಎಂಬ ಉತ್ತರ ಕೊಟ್ಟಿದ್ದಾರೆ. ಅದರ ಮೇಲೇ ಕೇಳಲಿ.

ಶ್ರೀ ಜೆ. ಹೆಚ್. ಪಟೇಲ್.—ವಿರೋಧ ಪಕ್ಷದ ನಾಯಕಿಯವರ ಪ್ರಶ್ನೆ ಬೇರೆ, ಹೆಬ್ಬಿಗೆಯವರ ಪ್ರಶ್ನೆ ಬೇರೆ.

ಅಧ್ಯಕ್ಷರು.—ಅರ್ಧ ಗಂಟೆಗೆ ಚರ್ಚೆಗೆ ನೋಟೀಸ್ ಕಳಿಸಿಕೊಡಿ

ಶ್ರೀ ಜೆ. ಹೆಚ್. ಪಟೇಲ್.—ಸಮರ್ಪಕವಾದ ಉತ್ತರವನ್ನು ನಾನು ಅವರಿಗೆ ಕಳಿಸಿಕೊಡುತ್ತೇನೆ

ಅಧ್ಯಕ್ಷರು.—ಉತ್ತರ ತಮಗೆ ಸಮರ್ಪಕವಾಗದಿದ್ದರೆ ಅರ್ಧ ಗಂಟೆ ಚರ್ಚೆಗೆ ಹಾಕಿ

ಕರ್ನಾಟಕ ರಾಜ್ಯ ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್

೫೦೦. ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯ ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್ ಇದರ ಜಂಟಿ ನಿರ್ದೇಶಕರಿಗೆ (ಅಂಕಿಅಂಶ) ನೀಡಲಾಗಿರುವ ಕೆಲಸ ಕಾರ್ಯಗಳೇನು ?

ಆ) ಜಂಟಿ ನಿರ್ದೇಶಕರಿಗೆ (ಅಂಕಿಅಂಶಗಳು) ಇವರಿಗೆ ನಿರ್ದಿಷ್ಟವಾದ ಹಾಗೂ ಸಾಕಷ್ಟು ಕೆಲಸಗಳು ಇಲ್ಲದಿರುವುದರಿಂದ ಈ ಹುದ್ದೆಯನ್ನು ಕೆಳದರ್ಜೆಗೆ ಇಳಿಸಲು ಅಥವಾ ರದ್ದುಪಡಿಸಲು ಸರ್ಕಾರ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಕಾರಣವೇನು ?

ಇ) ಈಗಿರುವ ಜಂಟಿ ನಿರ್ದೇಶಕರು (ಅಂಕಿಅಂಶಗಳು) ಇವರ ನಿಯೋಜನೆ ಅವಧಿ ಮುಗಿದಿದ್ದರೂ ಇವರನ್ನು ಏಕೆ ಮುಂದುವರಿಸಲಾಗಿದೆ ?

ಶ್ರೀ ಜೆ.ಹೆಚ್. ಪಟೀಲ್ (ಭಾರಿ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳ ಮತ್ತು ವಿದ್ಯುತ್ ಮಂತ್ರಿಗಳು). —

ಅ) ಕರ್ನಾಟಕ ರಾಜ್ಯ ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್ ಜಂಟಿ ನಿರ್ದೇಶಕರು (ಅಂಕಿಅಂಶ) ಇವರಿಗೆ ನೀಡಲಾಗಿರುವ ಕೆಲಸ ಕಾರ್ಯಗಳು ಈ ಕೆಳಕಂಡಂತೆ ಇವೆ.

ಅ) ಮಹೋದ್ಯಮದ ಸಾರ್ವಜನಿಕ ಉದ್ದಿಮೆಗಳಿಗೆ ಸಂಬಂಧಪಟ್ಟ ವಾರ್ಷಿಕ ವರದಿಯನ್ನು ತಯಾರು ಮಾಡಲು ಸಹಕರಿಸುವುದು ಮತ್ತು ಅದನ್ನು ವಿಧಾನ ಮಂಡಲಕ್ಕೆ ಒಪ್ಪಿಸುವಿಕೆ.

ಆ) ಮಹೋದ್ಯಮದ ವಿವಿಧ ಪ್ರಕಟಣೆಗಳನ್ನು ತಯಾರಿಸಿ ಮುದ್ರಣಗೊಳಿಸುವಲ್ಲಿ ಸಹಕರಿಸುವಿಕೆ

ಇ) ಸಾರ್ವಜನಿಕ ಉದ್ದಿಮೆಗಳ ಬಗ್ಗೆ ವಿಶೇಷ ವರದಿಗಳನ್ನು ತಯಾರಿಸುವಿಕೆ.

ಈ) ಮಾಸಿಕ ಹಾಗೂ ತ್ರೈಮಾಸಿಕ ಸಭೆಗಳಿಗೆ ಬೇಕಾದ ಮಾಹಿತಿಯನ್ನು ಸಾರ್ವಜನಿಕ ಉದ್ದಿಮೆಗಳಿಂದ ಸಂಗ್ರಹಿಸಿ ಸಕಾಲದಲ್ಲಿ ಸಭೆಗಳನ್ನು ನಡೆಸುವುದಂ ಮತ್ತು ಸಭೆಗಳಲ್ಲಿ ಭಾಗವಹಿಸುವುದು

ಉ) ಗಣಕೀಕೃತ ಅಧಿಕಾರಿಗಳ ಸೇವೆಯ (ಕಂಪ್ಯೂಟರೈಸ್ಡ್ ಎಕ್ಸಿಕ್ಯೂಟೀವ್ ಪ್ಲೇಸ್‌ಮೆಂಟ್ ಸರ್ವೀಸಸ್) ಮಾಹಿತಿಯ ಸಂಗ್ರಹಣೆ ಹಾಗೂ ನಿರ್ವಹಣೆ

ಆ) ಜಂಟಿ ನಿರ್ದೇಶಕರು (ಅಂಕಿಅಂಶ) ಇವರಿಗೆ ನಿರ್ಧಿಷ್ಟವಾದ ಹಾಗೂ ಸಾಕಷ್ಟು ಕೆಲಸಗಳಿರುವುದರಿಂದ ಹುದ್ದೆಯನ್ನು ಕೆಳದರ್ಜೆಗೆ ಇಳಿಸಲು ಅಥವಾ ರದ್ದು ಪಡಿಸಲು ಸರ್ಕಾರ ಯೋಜಿಸಿರುವುದಿಲ್ಲ.

ಇ) ಜಂಟಿ ನಿರ್ದೇಶಕರ ನಿಯೋಜನೆ ಅವಧಿ ಮುಗಿದಿರುವುದಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅಲ್ಲಿನ ಕೆಲಸವನ್ನು ಅಸಿಸ್ಟೆಂಟ್ ಡೈರೆಕ್ಟರ್ ಮಾಡಂತ್ತಿದ್ದರು. ವಿನಾ ಕಾರಣ ಅಲ್ಲಿಗೆ ಒಬ್ಬ ಜಂಟಿ ನಿರ್ದೇಶಕರನ್ನು ಪೋಸ್ಟ್ ಮಾಡಿದ್ದೀರಿ ಅಲ್ಲಿ ಕೆಲಸ ಕಾರ್ಯ ಇಲ್ಲ. ಅವನನ್ನು ಕೆಳಕ್ಕಿಳಿಸುವುದಿಲ್ಲ ಮೇಲಕ್ಕೆ ಕಳಿಸುವುದಿಲ್ಲವೆಂದು ಹೇಳುತ್ತಿದ್ದೀರಿ. ತಮ್ಮ ವಿವೇಚನೆಯನ್ನು ಉಪಯೋಗಿಸಿ ಕೆಲಸ ಮಾಡಿ. ವಿನಾಕಾರಣವಾಗಿ ಒಬ್ಬ ಮನುಷ್ಯನನ್ನು ಅಲ್ಲಿ ಇಟ್ಟುಕೊಂಡಿರುವುದಕ್ಕೆ ಬದಲು ಬೇರೆ ಇಲಾಖೆಗೆ ಕಳಿಸಿಕೊಡಿ.

SRI J. H. PATEL.—I will consider.

ಶ್ರೀ ವೇದಾಂತ ಹೆಬ್ಬಿಗೆ.—ನಾನು ಕೇಳಿದ ಪ್ರಶ್ನೆಗೆ ಸಮರ್ಪಕವಾದ ಉತ್ತರ ಬರಲಿಲ್ಲ. ಆದ್ದರಿಂದ ನಾನು ವಾಕ್ ಔಟ್ ಮಾಡುತ್ತೇನೆ.

(ಮಾನ್ಯ ಸದಸ್ಯರು ಸಭೆಯಿಂದ ನಿರ್ಗಮಿಸಿದರು)

ಎನ್‌ಜಿಇಎಫ್‌ನ ಪೂರಕ ಘಟಕಗಳು

ಶ್ರೀ. ವೀರಯ್ಯ ಸ್ವಾಮಿ (ಚಿಂಚೋಳಿ).—ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಎನ್‌ಜಿಇಎಫ್‌ನ ಒಟ್ಟು ಪೂರಕ ಘಟಕಗಳ ಸಂಖ್ಯೆ ಅವುಗಳ ಹೆಸರು ಮತ್ತು ವಿಳಾಸ ಮತ್ತು ಅವುಗಳ ಮಾಲಿಕರು, ವ್ಯವಸ್ಥಾಪಕ ನಿರ್ದೇಶಕರು ಪಾಲುದಾರರ ಹೆಸರುಗಳು ?

ಆ) ಕಳೆದ ಮೂರು ವರ್ಷದ ಅವಧಿಯಲ್ಲಿ ಪ್ರತಿಯೊಂದು ಪೂರಕ ಘಟಕದಿಂದ ಎನ್‌ಜಿಇಎಫ್‌ಗೆ ಸರಬರಾಜಾದ ಉತ್ಪನ್ನಗಳ ಒಟ್ಟು ಮೌಲ್ಯ (ಯಾವ ವಿಧದ ಉತ್ಪನ್ನ ಎಂಬ ಮಾಹಿತಿಯನ್ನು ಒದಗಿಸುವುದು)?

ಶ್ರೀ ಜೆ. ಹೆಚ್. ಪಟೀಲ್ (ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ವಿದ್ಯುತ್ ಸಚಿವರು). —

ಅ) ಅನುಬಂಧ–೧ರಲ್ಲಿ ತೋರಿಸಿದ ಹಾಗೆ

ಆ) ಅನುಬಂಧ–೨ರಲ್ಲಿ ತೋರಿಸಿದ ಹಾಗೆ